
ಲೇಖನ 04

# ನಂಜುನಿವಾರಕ ಸಮೃದ್ಧಿಯ ಸಂಕೇತ ಶಿವಪ್ರಿಯ ನಂದ್ಯಾವರ್ತ ಪುಷ್ಪ

"ಹೂವೂ ಚೆಲುವೆಲ್ಲಾ ನಂದೆಂದಿತು ಹೆಣ್ಣೂ ಹೂವ ಮುಡಿದು ಚೆಲುವೆ ತಾನೆಂದಿತು, ಪ್ರಕೃತಿಯ ಸೌಂದರ್ಯದ ಮೂಲವೇ ಬಣ್ಣದ ಬಣ್ಣದ ಹೂವುಗಳು ಪರಮಾತ್ಮನ ಪೂಜೆಯಲ್ಲಿ ಪಾದಕೆ ಅರ್ಪಿಸುವ ಸುಮಗಳ ರಾಶಿಯು ಅಗಣಿತ. ಉಷೆಯೂ ಮೂಡಲು ಇರುಳು ಕಳೆಯಲು, ಶ್ವೇತ ತಾರೆ ಅರಳಿತು ಹೂವು ನಂಜಬಟ್ಟಲು, ಗಿಡದಿ ಹೊಳೆಯಿತು ಚೆಲ್ಲಿದಂತೆ ಹಾಲು, ಧರೆಗಿಳಿಯಿತು ಪುಷ್ಪ ಶಿವನ ಪೂಜಿಸಲು, ಸೌಂದರ್ಯ ವರ್ಧಕ ವನಿತೆಯರ ಮೊಗಕೆ, ಪುಷ್ಪದಿಂದ ಪೂರ್ಣಗೊಂಡಿತು ಕಪ್ಪು ಕಾಡಿಗೆ" ಇದು ಕವಿಯೋರ್ವರ ಕವಿನುಡಿಯಿದು. "ಗಾತ್ರ ಚಿಕ್ಕದಾದರೇನು, ಹಾಲಿಗಿಂತ ಬಿಳುಪಿಹೆ. ಗಿಡದಿ ತುಂಬಾ ಹರಡಿ ನಾನು, ಪೂಜೆಗೆಂದು ನಗುತಿಹೆ, ನಂದಿಬಟ್ಟಲೆಂಬ ಹೆಸರು. ಇಂದು ನಾನು ಪಡೆದಿಹೆ ಶಿವನೇ ನಿನ್ನ ಪೂಜೆಗಾಗಿ ಇಂದು ನಾನು ಕಾದಿದೆ. ಕವಯಿತ್ರಿ ಮಹಿಮಾ. ಬಿ ಅವರ ನಂದ್ಯಾವರ್ತ ಪುಷ್ಪದ ಕವನದ ಸಾಲುಗಳು. ಪ್ರಕೃತಿಯು ತನ್ನ ಮಡಿಲಲಿ ಅಸಂಖ್ಯಾತ ಪುಷ್ಪರಾಶಿಗಳನು ತುಂಬಿಕೊಂಡಿದೆ. ಅಂದದ ಹೂವ ನೀಡಿ ಘಮಘಮಿಪ ಪರಿಮಳ ಹರಡುತಿದೆ. ಮನುಕುಲಕೆ ಅನಂತ ಅಸಂಖ್ಯಾತ ಉಡುಗೊರೆ ಅರ್ಪಿಸುತ್ತಿದೆ. ತನ್ನದೇ ವೈಶಿಷ್ಟ್ಯ ಮೋಡಿ ಮಾಡುವ ಪುಷ್ಪನಿಧಿ ಸಂದ್ಯಾವರ್ತ ಹೂವನು ಜಗದ ವನಸ್ಪತಿ ಭಂಡಾರಕೆ ಸೇರಿಸಿದೆ.

ಮೇಣದ ಹೂವೆಂದು ಕರೆಯಲ್ಪಡುವ ನಂಜಬಟ್ಟಲು ಆಳವಾದ ಆಧ್ಯಾತ್ಮಿಕ, ಸಾಂಸ್ಕೃತಿಕ ಮತ್ತು ಔಷಧಿಯ ಗುಣವನ್ನು ಹೊಂದಿದ ಪುಷ್ಪ, ಹಬ್ಬ ಹರಿದಿನ ವ್ರತ ನೇಮಗಳಲ್ಲಿ ಅರ್ಚನೆಯ ಪುಷ್ಪ ಮಾಲಿಕೆ. ಶಿವನ ಪರಮಪ್ರಿಯ ಪುಷ್ಪರಾಶಿಗಳಲಿ ನಂದ್ಯಾವರ್ತವೂ ಒಂದು. ಸೌಂದರ್ಯವರ್ಧಕ ಕಾಡಿಗೆ ತಯಾರಿಕೆಯ ಕಚ್ಚಾವಸ್ತು. ಕಣ್ಣಿನ ತೊಂದರೆಯ ನಿವಾರಕವೂ ಆಗಿದೆ ತಗರ. ನಂಜುನಿವಾರಕ ಸಮೃದ್ಧಿಯ ಸಂಕೇತ ಶಿವಪ್ರಿಯ ನಂದ್ಯಾವರ್ತ.



ಕ್ರೇಪ್ ಜಾಸ್ಮಿನ್ ಎಂದು ಕರೆಯಲ್ಪಡುವ ನಂಜಬಟ್ಟಲು ಹೂವು ಏಷ್ಯಾದ ಉಷ್ಣವಲಯ ಪ್ರದೇಶ, ಭಾರತ, ಚೀನಾ, ಭಾರತದ ಪಶ್ಚಿಮ ಬಂಗಾಲ, ಹಿಮಾಲಯ ಪ್ರದೇಶ ಆಸ್ಸಾಂಗೆ ಸ್ಥಳೀಯ ಸಸ್ಯವಾಗಿದೆ. ತಗರ ಪುಷ್ಪದ ಕುಲ ಕುಟುಂಬ ನೋಡೋಣ. ಅಪೋಸೈನೇಸಿಯೆ ಸಸ್ಯ ಕುಟುಂಬದಲ್ಲಿ ಜನಿಸಿದ ಹೂವಿನ ವೈಜ್ಞಾನಿಕ ಹೆಸರು ಟ್ಯಾಬರ್ನೆಮೊಂಟನ ಡೈವರಿಕಾಟಾ. ಹಿಂದಿಯಲ್ಲಿ ಚಾಂದಿನಿ. ಮಲಯಾಳಿಯಲ್ಲಿ ನಂದ್ಯಾರ್ ವಟ್ಟಂ, ತಮಿಳಿನಲ್ಲಿ ನಂದಿಯಾವಟ್ಟಂ, ಮರಾಠಿಯಲ್ಲಿ ತಗರ್. ತೆಲುಗಿನಲ್ಲಿ ನಂದ್ಯಾವರ್ರೈಮು, ಕೊಂಕಣಿಯಲ್ಲಿ ವಡ್ಡಿ, ಕರಾಡ ಭಾಷೆಯಲ್ಲಿ ನಂಡೀತಿ ಮಾತೃಭಾಷೆಯಲ್ಲಿ ನಂಜಟ್ಟಿ. ನಂಜಬಟ್ಟಲು. ಮಂಜಟ್ಟಿ, ರಂಜಬಟ್ಟಲು ಎಂಬ ನಾಮಾವಳಿ ಹೊಂದಿದೆ. ಇಂಗ್ಲಿಷಿನಲ್ಲಿ ಕ್ರೇಪ್ ಜಾಸ್ಮಿನ್, ಐ ಫ್ಲವರ್, ವ್ಯಾಕ್ಸ್ ಫ್ಲವರ್, ಪಿನ್ ವೀಲ್ ಎನ್ನುವರು. ಸಂಸ್ಕೃತ ಭಾಷೆಯಲ್ಲಿ ತಗರ, ನಂದಾವರ್ತ ಎಂಬ ಹೆಸರು ಪಡೆದಿದೆ.

ವಸಂತಕಾಲದ ಇರುಳಿನಲ್ಲಿ ಹಸಿರು ಗಿಡದಲ್ಲಿ ಮೊಸರು ಚೆಲ್ಲಿದಂತೆ ಕಾಣಿಸಿಕೊಳ್ಳುವ ಹೂ ರಾಶಿ ವಿರಳವಾದರೂ ವರ್ಷವಿಡಿ ಅರಳುತ್ತಿರುತ್ತದೆ. ಕಡುಹಸಿರು ಬಣ್ಣದ ಎಲೆಗಳನ್ನು ಹೊಂದಿರುವ ಬಿಳಿಯ ಬಣ್ಣದ ಹೂವುಗಳನ್ನು ಮೈ ತುಂಬಾ ಹೊತ್ತುಕೊಂಡು ನಳನಳಿಸುವ ಹೂವು ತುಂಬಿದ ಗಿಡ ನಂದಿಬಟ್ಟಲು. ಗಿಡವನ್ನು ಮನೆಯ ಅಂಗಳ ಅಥವಾ ಹಿತ್ತಲಿನಲ್ಲಿ ಬೆಳೆಸುವದು ಸಮೃದ್ಧಿಯ ಸಂಕೇತ, ನಂದಿ ಬಟ್ಟಲು ಭಾರತದ ಎಲ್ಲೆಡೆಯಲ್ಲಿ ಬೆಳೆಯುತ್ತಿದ್ದರು ವಿಶೇಷವಾಗಿ ಬಂಗಾಳ ಮತ್ತು ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಹಿಮಾಲಯದಲ್ಲಿ ಯಥೇಚ್ಚವಾಗಿ ಕಂಡುಬರುವ ನಂದಿಬಟ್ಟಲು ಈಶ್ವರನ ಪೂಜೆಗೆ ಶ್ರೇಷ್ಠ.

ದೇವಸ್ಥಾನಗಳಲ್ಲಿ ಪೂಜೆಗೆ ಹೂವು ಇರಲೆಂಬ ಉದ್ದೇಶದಿಂದ ಇದನ್ನು ಬೆಳೆಸಲಾಗುತ್ತದೆ. ಯೂರೋಪಿನಲ್ಲಿ ನಂದಿಬಟ್ಟಲನ್ನು ಸುಗಂಧದ್ರವ್ಯವಾಗಿ ಮತ್ತು ಮಸಾಲೆ ಪದಾರ್ಥವಾಗಿ ಬಳಸುತ್ತಾರೆ ಎನ್ನಲಾಗಿದೆ. ವ್ರತ ನೇಮಗಳ ಪುಷ್ಪ ಪೂಜೆಯ ಪುಷ್ಪಾರ್ಚನೆಗೆ ಮಹಾವಿಷ್ಣು ಪೂಜಾ, ಸರಸ್ವತಿ ಪೂಜಾ, ನಿತ್ಯ ಸೋಮವಾರವ್ರತ, ಧನ್ವಂತರಿ ಪೂಜಾ, ಸತ್ಯಗಣಪತಿ ವ್ರತ, ನಾಗಪಂಚಮಿ ವ್ರತ. ಕೇದಾರೇಶ್ವರ ವೃತ, ಹನುಮ ಜಯಂತಿಗಳಲ್ಲಿ ಬಳಕೆಯಿದೆ. ನಾರದ ಪುರಾಣದಲ್ಲಿನ ಉಲ್ಲೇಖದಂತೆ ಮಾತುಲಿಂಗ ಚ ತಗರಂ ರವೌ ನೈವಾರ್ಪಯೇತ್ತ್ವಚಿತ್" ಮಾದಲಕಂಚಿಯ ಪುಷ್ಪ ಮತ್ತು ನಂಜಬಟ್ಟಲು ಪುಷ್ಪವನ್ನು ಸೂರ್ಯನಿಗೆ ಎಂದು ಅರ್ಪಿಸಬಾರದು.

"ಪಾರಿಭದ್ರಂ ಪಾಟಲಾ ಚ ಬಕುಲಂ ಗಿರಿಶಾಲಿನಿ/ ತಿಲಕಂ ಬಾಸು ವನಜಂ ಪೀತಕಂ ತಗರಮ ತಥಾ//" ಹಾಲುವಾಣದ ಹೂವು, ಪಾದರಿ, ರಂಜಲು, ಬೆಟ್ಟದ ಮಲ್ಲಿಗೆ, ಲೋದ್ರಪುಷ್ಪ, ಅರಿಶಿನ ಹೂವು ಮತ್ತು ನಂದಿಬಟ್ಟಲು ಶಿವನಿಗೆ ಪ್ರಿಯವಾದ ಪುಷ್ಪಗಳಾಗಿದೆ.

ಬಂಗಾರ ವಜ್ರದ ವ್ಯಾಪಾರಿಗಳಿಗ ವೃಕ್ಷರಕ್ಷಣೆಗಾಗಿ ಒಂದು ಕಿವಿ ಮಾತು " ಚಂಪಕ ಕುಸುಮ್ಮೈ: ಕನಕಂ ವಿದ್ರುಮ ಸಂಪಶ್ಚ ಬಂಧುಜೀವೆನ / ಕುರುವಕ ವೃಧ್ಯಾ ವಜ್ರಂ ವೈಡೂರ್ಯಂ ನಂದಿಕಾವರ್ತ್ಯೈ:// " ವಜ್ರ ವೈಡೂರ್ಯ ಬಂಗಾರವೆ ಮೊದಲಾದವುಗಳ ಮೇಲೂ ವೃಕ್ಷಗಳಿಂದ ಪರಿಣಾಮ ಆಗುತ್ತದೆ. ಚಂಪಕದಿಂದ ಬಂಗಾರ ವೃದ್ದಿ, ಕುರುಬಕ, ನಂದಿಬಟ್ಟಲಿನಿಂದ ವಜ್ರ, ರತ್ನ ಅಧಿಕ ವೃದ್ಧಿಯಾಗುತ್ತದೆ.

ಅಂದರೆ ಬಂಗಾರ ವಜ್ರ ವ್ಯಾಪಾರಿಗಳು ಈ ವೃಕ್ಷಗಳನ್ನು ನೆಟ್ಟು ಬೆಳೆಸಬೇಕು ಎಂದು ಸಚಿತ್ರ ವನ ನಿರ್ಮಾಣ ಗ್ರಂಥದಲ್ಲಿ ಉಲ್ಲೇಖವಿದೆ.

ನಂದಿಬಟ್ಟಲು ಶಿವನಿಗೆ ಸಂಬಂಧಿಸಿದಂತೆ ದಂತಕತೆಗಳಿವೆ. ಶಿಲಾದ ಎಂಬ ಋಷಿ ಸಂತಾನವಿಲ್ಲದೇ ದುಃಖಿತನಾಗಿ, ಸಾವಿಲ್ಲದ ಪುತ್ರನನ್ನು ಪಡೆಯಲು ಶಿವನನ್ನು ಕುರಿತು ತಪ್ಪಸ್ಸು ಮಾಡುತ್ತಾನೆ. ಅವನ ತಪಸ್ಸಿಗೆ ಮೆಚ್ಚಿದ ಶಿವನು ತಾನೇ ಶಿಲಾದನ ಪುತ್ರನಾಗಿ ಜನಿಸುವದಾಗಿ ವರ ನೀಡುತ್ತಾನೆ. ಶಿಲಾದ ಜನಿಸಿದ ಮಗುವಿಗೆ ನಂದಿ ಎಂದು ಹೆಸರಿಡುತ್ತಾನೆ. ಶಿವನು ನಂದಿಯನ್ನು ತನ್ನ ವಾಹನ ಮಾಡಿಕೊಳ್ಳುವದಾಗಿ ಭರವಸೆ ನೀಡಿದಂತೆ ವಾಹನ ಮಾಡಿಕೊಳ್ಳುತ್ತಾನೆ. ಸಮುದ್ರ ಮಂಥನದ ಸಮಯದಲ್ಲಿ ವಿಷವು ಹೊರಬಂದಾಗ ಶಿವನು ವಿಷವನ್ನು ಕುಡಿಯುತ್ತಾನೆ. ಕುಡಿಯುವಾಗ ನೆಲಕ್ಕೆ ಬಿದ್ದ ಹನಿಗಳನ್ನು ನಂದಿ ನಾಲಿಗೆಯಿಂದ ನೆಕ್ಕುತ್ತಾನೆ. ತಕ್ಷಣ ತಿಳಿದ ಶಿವನು ಪಕ್ಕದಲ್ಲಿದ್ದ ಹೂವನ್ನು ನಂದಿಗೆ ತಿನ್ನಿಸುತ್ತಾನೆ : ಆಗ ನಂದಿಯ ವಿಷ ದೋಷ ನಿವಾರಣೆಯಾಗುತ್ತದೆ. ನಂದಿಯ ನಂಜನ್ನು ನಿವಾರಣೆ ಮಾಡಿರುವ ಪುಷ್ಪಕ್ಕೆ ನಂದಿಬಟ್ಟಲು ಹೆಸರು ಬಂತು ಎಂದು ಜನಪದ ಕಥೆಯಿದೆ.

ಕ್ಷಾರಗಳು, ಟ್ಯಾನಿನ್, ವೆಲಿರಿಯಾನ್ ಗ್ಲುಕೋಸೈಡ್ ಮತ್ತು ರೆಸಿನ್ ಎಂಬ ರಾಸಾಯನಿಕ ಘಟಕಗಳು ಹೊಂದಿರುವ ನಂದಿಬಟ್ಟಲು ಮನುಷ್ಯರ ಆರೋಗ್ಯ ಕಾಪಾಡುವಲ್ಲಿಯೂ ಪರಿಣಾಮಕಾರಿ ವನಸ್ಪತಿಯಾಗಿದೆ. ನೇತ್ರರೋಗಗಳಲ್ಲಿ ಇದು ಅತ್ಯಂತ ಪರಿಣಾಮಕಾರಿ.

ರಕ್ತಭೇದಿ, ಗಾಯ ವಾಸಿ, ಜಂತು, ಹಲ್ಲುನೋವು ಇಸುಬು ತದ್ದು, ಕಣ್ಣಿನ ಪೊರೆ, ಮುಟ್ಟು ನಿಲ್ಲುವ ಸಮಯದ ತೊಂದರೆ, ನಿದ್ರಾ ಹೀನತೆ, ಹಿಸ್ಟಿರಿಯಾ, ಅಪಸ್ಮಾರ, ಮಲಬದ್ದತೆ, ಜ್ವರ, ಹಾವು ಕಡಿತ ಕಾಯಿಲೆಗಳಿಗೆ ಉತ್ತಮ ಔಷಧವಾಗಿದೆ. ಹೂವು, ಬೇರು, ಎಲೆ ಔಷಧಿಯ ಭಾಗಗಳಾಗಿದೆ. ನಂಜಟ್ಟೆ ಗಿಡದ ಬೇರನ್ನು ಹಿಂದಿನ ದಿನ ರಾತ್ರಿ ಮಣ್ಣಿನ ಪಾತ್ರೆಯಲ್ಲಿರಿಸಿದ ನೀರಲ್ಲಿ ಬೆಲ್ತಗೆ (ಬಿಳಿ ಅಕ್ಕಿ) ಅಕ್ಕಿ ಸೇರಿಸಿ ಅರೆದು ಲೇಪನ ಮಾಡಿದರೆ ನಂಜು ಕುರು ಮತ್ತು ನಂಜು ಬಾವುಗಳಿಗೆ ಪರಿಹಾರ. ಸ್ತ್ರೀಯರು ಮಕ್ಕಳನ್ನು ಹಡೆದಾಗ ನಂಜು ಏರದಂತೆ ಮಾಡಲು ನಂದಿಬಟ್ಟಲು ಬೇರು, ತೊಂಡಜ್ಜಿ ಬೇರುಗಳನ್ನು ಅಂಬೆ ರಸದಲ್ಲಿ ತೇಯ್ದು ಐದು ಚಮಚ ಗಂಧ ಮಾಡಿ ಬಾಣಂತಿಯರಿಗೆ ಹಡೆದ ಎರಡು ತಾಸಿನ ನಂತರ ಸೇವಿಸಲು ಕೊಟ್ಟರೆ ನಂಜು ಏರುವದನ್ನು ತಡೆಗಟ್ಟುತ್ತದೆ. ಸರ್ಪಸುತ್ತಿಗೂ ಬೇರಿನಿಂದ ಔಷಧ ಮಾಡುವರು.

ಕಾಡಿಗೆ ತಯಾರಿಸಿಕೊಳ್ಳುವ ವಿಧಾನ ಹೆಣ್ಣುಮಕ್ಕಳಿಗೆ ಸಿಂಗರಿಸಿಕೊಳ್ಳುವದೆಂದರೆ ಬಹಳ ಇಷ್ಟವಾದ ಸಂಗತಿ. ಕಣ್ಣಿಗೆ ಕಾಡಿಗೆ ಹಾಕುವದರಿಂದ ಕಣ್ಣಿನ ಅಂದ ಹೆಚ್ಚುವದಲ್ಲದೇ ದೃಷ್ಟಿಯೂ ತೀಕ್ಷ್ಣವಾಗುತ್ತದೆ. ನಂದಿ ಬಟ್ಟಲು ಹೂವುಗಳನ್ನು ಜಜ್ಜಿ ರಸ ತೆಗೆದಿಟ್ಟುಕೊಳ್ಳಬೇಕು. ಈ ರಸವನ್ನು ತೆಳುವಾದ ಸ್ವಚ್ಛವಾದ ಬಿಳಿಯ ಹತ್ತಿ ಬಟ್ಟೆಯಲ್ಲಿ ಶೋಧಿಸಬೇಕು. ನಂತರ ಬಟ್ಟೆಯನ್ನು ಚಿಕ್ಕಚಿಕ್ಕ ತುಂಡುಗಳನ್ನಾಗಿ ಕತ್ತರಿಸಿ ಬತ್ತಿಯಂತೆ ಮಾಡಿ ಶೋಧಿಸಿದ ರಸದಲ್ಲಿ ಅದ್ದಬೇಕು. ಬತ್ತಿಯೂ ರಸವನ್ನು ಚೆನ್ನಾಗಿ ಹೀರಿಕೊಂಡ ಮೇಲೆ ನೆರಳಿನಲ್ಲಿಯೇ ಆ ಬತ್ತಿಯನ್ನು ಒಣಗಿಸಿಟ್ಟುಕೊಳ್ಳಬೇಕು. ನಂತರ ಹಣತೆಯಲ್ಲಿ ಹರಳೆಣ್ಣೆ ಇಟ್ಟು ಈ ಬತ್ತಿಯನ್ನು ಉರಿಸಬೇಕು.

ಹಣತೆಯ ಮೇಲೆ ಒಂದು ಪಾತ್ರೆಯನ್ನು ಬೋರಲು ಹಾಕಿರಬೇಕು. ದೀಪದ ಹೊಗೆಯೆಲ್ಲಾ ಆ ಪಾತ್ರೆಯಲ್ಲಿ ಸಂಗ್ರಹವಾಗುತ್ತದೆ. ನಂತರ ಅದಕ್ಕೆ ಸ್ವಲ್ಪ ಬೆಣ್ಣೆ ಬೆರೆಸಿ ತೆಗೆದಿಟ್ಟುಕೊಳ್ಳಬೇಕು. ಪ್ರತಿದಿನ ಕಣ್ಣಿಗೆ ಹಚ್ಚಿಕೊಂಡಾಗ ಕಣ್ಣಿನ ಆರೋಗ್ಯ ಚೆನ್ನಾಗಿರುವುದು.

ನಮ್ಮ ಸಂಸ್ಕೃತಿಯ ಸಾಂಪ್ರದಾಯಿಕ ಮೌಲ್ಯಗಳನ್ನು ಬಲಪಡಿಸಲು ಜೈವಿಕ ವೈವಿಧ್ಯತೆ ಮತ್ತು ಪರಿಸರ ಸಮಗ್ರ ಅಭಿವೃದ್ಧಿಗಾಗಿ ಧಾರ್ಮಿಕ ಮತ್ತು ಔಷಧಿಯ ಸಸ್ಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಾಗಿದೆ. ನಂಜುಬಟ್ಟಲಂತಹ ಸಾವಿರಾರು ಸಸ್ಯಗಳ ಕುರಿತು ಜನರಲ್ಲಿ ಅರಿವು ಮೂಡಿಸೋಣ.

**ಉಮಾಪತಿ ಭಟ್ಟ ಕೆ ವಿ**
**ಪರಿಸರ ಕಾರ್ಯಕರ್ತರು**
**ಶಿರಸಿ**